

بسم اللهِ الرّحمٰن الرّحيم

# ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಬಗ್ಗೆ ಇರುವ ಭವಿಷ್ಯವಾಣಿಗಳ ಈಡೇರಿಕೆಯ ವಿವರಣೆ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **20-02-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಫೆಬ್ರವರಿ ದಿನಾಂಕ 20 ಆಗಿದೆ. ಅಹ್ಮದಿಯಾ ಜಮಾಅತ್ ಈ ದಿನವನ್ನು ಮುಸ್ಲಿಹ್ ಮೌಊದ್ ಭವಿಷ್ಯವಾಣಿಯ ದಿನವಾಗಿ ಆಚರಿಸುತ್ತದೆ. ಇಂದು ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಭವಿಷ್ಯವಾಣಿಯ ಬಗ್ಗೆ ವಿವಿಧ ಸಂದರ್ಭಗಳಲ್ಲಿ ಹೇಳಿದ ಮಾತುಗಳಲ್ಲಿ ಕೆಲವನ್ನು ನಿಮ್ಮ ಮುಂದೆ ಇರಿಸುವೆನು. 1944ರಲ್ಲಿ ಮುಸ್ಲಿಹ್ ಮೌಊದ್ ಕುರಿತ ಭವಿಷ್ಯವಾಣಿಯ ಹಿನ್ನೆಲೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು:

"ಇಂದಿಗೆ ಸರೀ ಐವತ್ತೆಂಟು ವರ್ಷಗಳ ಹಿಂದೆ ಇದೇ ಹೋಶಿಯಾರ್‌ಪುರದಲ್ಲಿ ನನ್ನ ಮುಂದೆ ಇರುವ ಈ ಕಟ್ಟಡದಲ್ಲಿ, **ತವೇಲಾ** ಎಂದು ಕರೆಯಲ್ಪಡುತ್ತಿದ್ದ, ಎಂದರೆ ವಾಸದ ಮನೆ ಅಲ್ಲ ಎಂಬ ಅರ್ಥದಲ್ಲಿ ಕರೆಯಲ್ಪಡುವ ಈ ಕಟ್ಟಡದಲ್ಲಿ ಖಾದಿಯಾನ್ ನಿವಾಸಿಯಾದ ಒಬ್ಬ ಅಪರಿಚಿತ ವ್ಯಕ್ತಿ – ಅವರನ್ನು ಖಾದಿಯಾನಿನ ಜನರು ಸಹ ಚೆನ್ನಾಗಿ ಪರಿಚಯಿಸಿರಲಿಲ್ಲ– ಇಸ್ಲಾಮ್ ಮತ್ತು ಇಸ್ಲಾಮಿನ ಸ್ಥಾಪಕರ ಬಗ್ಗೆ ಜನರು ಹೊಂದಿದ್ದ ವಿರೋಧವನ್ನು ಕಂಡು ಅಲ್ಲಾಹನ ಸನ್ನಿಧಿಯಲ್ಲಿ ಏಕಾಂತವಾಗಿ ಆರಾಧನೆ ಮಾಡಿ ಇಸ್ಲಾಮಿಗೆ ಸಹಾಯಕವಾದ ಮತ್ತು ಅದನ್ನು ಬೆಂಬಲಿಸುವ ದೃಷ್ಟಾಂತವನ್ನು ತೋರಿಸಬೇಕೆಂದು ಅಲ್ಲಾಹನೊಂದಿಗೆ ಬೇಡಿಕೊಳ್ಳಲು ಆಗಮಿಸಿದರು. ನಲ್ವತ್ತು ದಿನ ಪ್ರಾರ್ಥನೆ ಮಾಡಿದ ನಂತರ ಅಲ್ಲಾಹನು ಅವರಿಗೆ ಒಂದು ದೃಷ್ಟಾಂತವನ್ನು ನೀಡಿದನು. ಆ ದೃಷ್ಟಾಂತ ಹೀಗಿತ್ತು: ನಾನು ನಿನಗೊಬ್ಬ ಪುತ್ರನನ್ನು ನೀಡುವೆನು– ಕೆಲವು ವಿಶೇಷ ಗುಣಗಳನ್ನು ಹೊಂದಿರುವ ಓರ್ವ ಸುಪುತ್ರ. ಅವನು ಇಸ್ಲಾಮನ್ನು ಲೋಕದ ಎಲ್ಲೆಗಳ ತನಕ ಹರಡುವನು. ಪವಿತ್ರ ಖುರ್‌ಆನಿನ ಜ್ಞಾನವನ್ನು ಜನರಿಗೆ ಕಲಿಸುವನು. ಅವನು ಕಾರುಣ್ಯ ಮತ್ತು ಅನುಗ್ರಹದ ಚಿಹ್ನೆಯಾಗುವನು. ಇಸ್ಲಾಮಿನ ಪ್ರಚಾರಕ್ಕೆ ಆವಶ್ಯಕವಾಗಿರುವ ಧಾರ್ಮಿಕ ಮತ್ತು ಲೌಕಿಕ ಜ್ಞಾನಗಳನ್ನು ಅವನಿಗೆ ನೀಡಲಾಗುವುದು. ಅವನಿಗೆ ದೀರ್ಘಾಯುಸ್ಸು ನೀಡಲ್ಪಡುವುದು. ಅವನು ಲೋಕದ ಎಲ್ಲೆಗಳ ತನಕ ಪ್ರಸಿದ್ಧಿ ಗಳಿಸುವನು."

ನಂತರ ಮತ್ತೊಂದು ಕಡೆ ಅವರು ಹೀಗೆ ಹೇಳುತ್ತಾರೆ: "ಮುಸ್ಲಿಹ್ ಮೌಊದ್ ಭವಿಷ್ಯವಾಣಿ ಬಗ್ಗೆ ಪ್ರಕಟಣೆ ಹೊರಡಿಸಿದಾಗ ಶತ್ರುಗಳು ಆಕ್ಷೇಪಗಳ ಸರಣಿ ಪ್ರಾರಂಭಿಸಿದರು. ಶತ್ರುಗಳ ಆಕ್ಷೇಪಗಳಿಗೆ 1886 ಮಾರ್ಚ್ ದಿನಾಂಕ 22ರಂದು ಇನ್ನೊಂದು ಪ್ರಕಟಣೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಉತ್ತರ ನೀಡಿದರು. ಶತ್ರುಗಳು ಹೀಗೆ ಹೇಳುತ್ತಾರೆ– ನನಗೆ ಒಬ್ಬ ಪುತ್ರ ಜನಿಸುವನೆಂದು ಹೇಳುವುದರಲ್ಲಿ ವಿಶೇಷವೇನಿದೆ? ಜನರಿಗೆ ಪುತ್ರ ಸಂತತಿ ಹುಟ್ಟುತ್ತಾ ಇಲ್ಲವೇ? ನಿಮಗೆ ಒಬ್ಬ ಪುತ್ರ ಜನಿಸಿದರೆ ಲೋಕಕ್ಕೆ ಒಂದು ದೃಷ್ಟಾಂತ ತೋರಿಸಲಾಗಿದೆ ಎಂದು ಸಾಬೀತಾಗುವುದಾದರೂ ಹೇಗೆ? ಎಂದು. ಜನರ ಈ ಆರೋಪಗಳಿಗೆ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: 'ನನಗೆ ಒಬ್ಬ ಪುತ್ರನು ಜನಿಸುವ ಬಗ್ಗೆ ಮಾತ್ರ ನಾನು ಭವಿಷ್ಯವಾಣಿ ಪ್ರಕಟಿಸಲಿಲ್ಲ. ನಾನು ಹೇಳಿದ್ದೇನೆಂದರೆ ನನ್ನ ಪ್ರಾರ್ಥನೆಗಳನ್ನು ಅಲ್ಲಾಹನು ಅಂಗೀಕರಿಸಿ, ಎಂತಹ ಅನುಗ್ರಹಿಸಲ್ಪಟ್ಟ ಒಂದು ಆತ್ಮವನ್ನು ಕಳುಹಿಸುವನೆಂದು ಅವನು ವಾಗ್ದಾನ ನೀಡಿರುವನೆಂದರೆ ಆ ಆತ್ಮದ ಬಾಹ್ಯ ಮತ್ತು ಆಂತರಿಕ ಅನುಗ್ರಹಗಳು ಲೋಕದಾದ್ಯಂತ ಹರಡುವುವು.' ಇದು ಆ ಭವಿಷ್ಯವಾಣಿಯ ಸಾರಾಂಶವಾಗಿತ್ತು."

ಇನ್ನೊಂದು ಕಡೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದರು: "ಮುಸ್ಲಿಹ್ ಮೌಊದ್ ಮುನ್ನೂರು ನಾನೂರು ವರ್ಷಗಳ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಂಶದಲ್ಲಿ ಜನಿಸುವರು ಎಂದು ಕೆಲವರು ಹೇಳುತ್ತಾರೆ. ಹೀಗೆ ಹೇಳುವವರು ದೇವಭಯವನ್ನು ಹೊಂದಿ ಭವಿಷ್ಯವಾಣಿಯ ಶಬ್ದಗಳ ಬಗ್ಗೆ ಚಿಂತಿಸುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಈಗ ಜನರು ಇಸ್ಲಾಮಿನ ವಿರುದ್ಧ ಆಕ್ಷೇಪಿಸುತ್ತಾರೆ. ಇಸ್ಲಾಮ್ ದೃಷ್ಟಾಂತಗಳನ್ನು ತೋರಿಸುವ ಶಕ್ತಿ ಹೊಂದಿಲ್ಲ ಎಂದು ಅವರು ಆಕ್ಷೇಪಿಸುತ್ತಾರೆ. ಆದರೆ, ಈಗ ಮುಸ್ಲಿಹ್ ಮೌಊದ್ ಆಗಮಿಸಲಾರರು ಎಂದು ಹೇಳುವವರು ಸೂಚಿಸುವುದೇನೆಂದರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನೊಂದಿಗೆ ಈ ರೀತಿ ಪ್ರಾರ್ಥಿಸಿದಾಗ ಅಲ್ಲಾಹನು ಹೇಳಿದನು: ನಾನು ಮುನ್ನೂರು ವರ್ಷಗಳ ನಂತರ ನಿನಗೊಬ್ಬ ಪುತ್ರನನ್ನು ನೀಡುವೆನು. ಅವನು ಇಸ್ಲಾಮಿನ ಸತ್ಯತೆಗೆ ದೃಷ್ಟಾಂತವಾಗುವನು ಎಂದು. ಈ ಮಾತನ್ನು ಲೋಕದಲ್ಲಿ ಯಾರಾದರೂ ಸರಿಯೆಂದು ಹೇಳುವರೇ? ಒಬ್ಬ ಹುಚ್ಚ ಸಹ ಇಂತಹ ಮಾತನ್ನು ಅಲ್ಲಾಹನಿಗೆ ಮತ್ತು ಅವನ ಸಂದೇಶವಾಹಕನಿಗೆ ಅನ್ವಯಿಸಿ ಹೇಳಲಾರನು. ಯಾವ ಜನರು ದೃಷ್ಟಾಂತವನ್ನು ಕಾಣಲು ಬಯಸಿದ್ದರೋ ಅವರ ಜೀವಿತ ಕಾಲದಲ್ಲಿಯೇ ಆ ದೃಷ್ಟಾಂತ ಈಡೇರಬೇಕಾಗಿತ್ತು. ಅದು ಹಾಗೆಯೇ ಆಯಿತು. 1889ರಲ್ಲಿ ನಾನು ಅಲ್ಲಾಹನ ಭವಿಷ್ಯವಾಣಿ ಪ್ರಕಾರ ಜನಿಸಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ದೃಷ್ಟಾಂತವನ್ನು ಆವಶ್ಯಪಟ್ಟವರು ಆಗ ಜೀವಿಸಿದ್ದರು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ಒಂದು ಸ್ವಪ್ನವನ್ನು ವಿವರಿಸುತ್ತಾ ಈ ರೀತಿ

ಹೇಳಿದರು: "ನಾನು ನನ್ನ ಒಂದು ಸ್ವಪ್ನ ಮತ್ತು ಈ ಭವಿಷ್ಯವಾಣಿಗಳ ಮಧ್ಯೆ ಇರುವ ಸಾಮ್ಯತೆಗಳನ್ನು ಈಗ ವಿವರಿಸುವೆನು: ಸ್ವಪ್ನದಲ್ಲಿ ನಾನು ಕಂಡೆನು– ನನ್ನ ನಾಲಗೆಯಲ್ಲಿ ಈ ವಾಕ್ಯ ಹೊರಟಿತು: **ಅನಲ್ ಮಸೀಹುಲ್ ಮೌಊದು ವ ಮಸೀಲುಹೂ ವ ಖಲೀಫತುಹೂ.** (ನಾನು ಮಸೀಹ್ ಮೌಊದ್, ಅವರ ಸಾದೃಶ್ಯನು, ಮತ್ತು ಅವರ ಖಲೀಫ.) ನನಗೆ ಇದು ವಿಚಿತ್ರವಾಗಿ ಕಂಡಿತು. ನನ್ನ ಬಾಯಿಯಿಂದ ಇಂತಹ ವಾಕ್ಯ ಏಕೆ ಜಾರಿಗೊಂಡಿತು ಎಂದು ನಾನು ಯೋಚಿಸಿದೆ. ನಂತರ ಕೆಲವು ಸ್ನೇಹಿತರು ಹೇಳಿದರು: 1886 ಫೆಬ್ರವರಿ ದಿನಾಂಕ 20ರ ಪ್ರಕಟಣೆಯಲ್ಲಿ ಸಹ ಹೀಗೆ ಬರೆದಿದೆ: **ಓಹ್ ದುನ್‌ಯಾಮೇಂ ಆಯೇಗಾ ಔರ್ ಅಪ್ನೇ ಮಸೀಹೀ ನಫ್ಸ್ ಔರ್ ರೂಹುಲ್ ಹಖ್ ಕಿ ಬರ್‌ಕತ್‌ಸೆ ಬಹುತೋಂ ಕೋ ಬೀಮಾರಿಯೋಂಸೆ ಸಾಫ್ ಕರೇಗ.** (ಅವನು ಲೋಕಕ್ಕೆ ಬಂದು ತನ್ನ ಮಸೀಹೀ ನಫ್ಸ್ ಮತ್ತು ರೂಹುಲ್ ಹಖ್‌ಗಳ ಅನುಗ್ರಹದಿಂದ ಅನೇಕರನ್ನು ರೋಗಗಳಿಂದ ಗುಣ ಪಡಿಸುವನು.) ಈ ಭವಿಷ್ಯವಾಣಿಯಲ್ಲಿ ಮಸೀಹ್ ಎಂಬ ಶಬ್ದ ಬಳಸಲಾಗಿದೆ. ನಾನು ಸ್ವಪ್ನದಲ್ಲಿ ವಿಗ್ರಹಗಳನ್ನು ಒಡೆಯುವುದಾಗಿಯೂ ಕಂಡಿರುವೆನು. ಇದರ ಬಗ್ಗೆ ಸಹ ಭವಿಷ್ಯವಾಣಿಯಲ್ಲಿ ಸೂಚಿಸಲಾಗಿದೆ. ರೂಹುಲ್ ಹಖ್ ಮೂಲಕ ಅನೇಕರ ರೋಗಗಳನ್ನು ಗುಣ ಪಡಿಸುವುದಾಗಿ ಹೇಳಲಾಗಿದೆ. ರೂಹುಲ್ ಹಖ್ ಎಂದರೆ ತೌಹೀದ್ (ಏಕದೇವ ವಿಶ್ವಾಸದ) ಆತ್ಮವಾಗಿದೆ. ಮೂರನೆಯದಾಗಿ ನಾನು ಸ್ವಪ್ನದಲ್ಲಿ ಓಡುತ್ತಾ ಹೋಗುತ್ತಿರುವುದಾಗಿಯೂ ಭೂಮಿಯಲ್ಲಿ ಮುಂದೆ ಸಾಗುತ್ತಿರುವುದಾಗಿಯೂ ಕಂಡೆನು. ಇದು ಸಹ ಮುಸ್ಲಿಹ್ ಮೌಊದ್ ಭವಿಷ್ಯವಾಣಿ ಪ್ರಕಾರವೇ ಆಗಿದೆ. ಏಕೆಂದರೆ ಅದರಲ್ಲಿ ಹೀಗೆ ಹೇಳಲಾಗಿದೆ– **ಅವನು ಬೇಗ ಬೇಗನೆ ಬೆಳವಣಿಗೆ ಪಡೆಯುವನು** ಎಂದು. ನಾನು ಸ್ವಪ್ನದಲ್ಲಿ ಕಂಡೆನು– ನಾನು ಕೆಲವು ವಿದೇಶಗಳಿಗೆ ಹೋದೆನು. ಅಲ್ಲಿ ನಾನು ಕೆಲಸ ಮುಗಿಸುವ ಮೊದಲೇ ಇನ್ನಷ್ಟು ಮುಂದೆ ಸಾಗಲು ಬಯಸುತ್ತೇನೆ. ಇದರ ಬಗ್ಗೆ ಸಹ ಭವಿಷ್ಯವಾಣಿಯಲ್ಲಿ ಸೂಚನೆ ಇದೆ. ಮುಸ್ಲಿಹ್ ಮೌಊದ್ **ಭೂಮಿಯ ಎಲ್ಲೆಗಳ ತನಕ ಪ್ರಸಿದ್ಧಿ ಗಳಿಸುವನು** ಎಂದು ಅದರಲ್ಲಿ ಹೇಳಲಾಗಿದೆ. ಭವಿಷ್ಯವಾಣಿಯಲ್ಲಿ ಮುಸ್ಲಿಹ್ ಮೌಊದ್ **ಬಾಹ್ಯ ಮತ್ತು ಆಂತರಿಕ ಜ್ಞಾನವನ್ನು ಸಂಪೂರ್ಣವಾಗಿ ಗಳಿಸುವನು** ಎಂದು ಹೇಳಲಾಗಿದೆ. ನಾನು ಇದಕ್ಕೆ ಸಂಬಂಧಿಸಿ ಸ್ವಪ್ನದಲ್ಲಿ ಹೀಗೆ ಕಂಡೆನು: ನಾನು ಉಚ್ಚಸ್ವರದಲ್ಲಿ ಹೇಳುತ್ತಿದ್ದೇನೆ. ಇಸ್ಲಾಮ್ ಮತ್ತು ಅರಬಿ ಭಾಷೆಯ ಜ್ಞಾನ ನನಗೆ ತಾಯಿಯ ಮಡಿಲಲ್ಲಿ ಮೊಲೆ ಹಾಲಿನೊಂದಿಗೆ ಕುಡಿಸಲಾಗಿದೆ ಎಂದು. ಅದೇ ರೀತಿ ಮುಸ್ಲಿಹ್ ಮೌಊದ್ ಬಗ್ಗೆ **ಅವನು ಅಲ್ಲಾಹನ ವೈಭವದ ಪ್ರಕಟಣೆ ಮಾಡುವನು** ಎಂದು ಹೇಳಲಾಗಿದೆ. ನಾನು ಸ್ವಪ್ನದಲ್ಲಿ ಕಂಡೆನು ಅಲ್ಲಾಹನು ಹಝ್ರತ್ ಮುಹಮ್ಮದ್ ﷺ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನನ್ನ ನಾಲಗೆಯಲ್ಲಿ ಮಾತನಾಡಿದರು. ಇದು ಅಲ್ಲಾಹನ ವೈಭವದ ಅದ್ಭುತ ಪ್ರಕಟಣೆಯಾಗಿದೆ.

ಮುಸ್ಲಿಹ್ ಮೌಊದ್ ಬಗ್ಗೆ **ಅವನು ಬಲಶಾಲಿಯೂ ಐಶ್ವರ್ಯವಂತನೂ ಆಗುವನೆಂದು** ಹೇಳಲಾಗಿದೆ. ನಾನು ಸ್ವಪ್ನದಲ್ಲಿ ಹೀಗೆ ಕಂಡೆನು: ನಾನು ಒಂದು ಜನಾಂಗಕ್ಕೆ ಒಬ್ಬ ನಾಯಕನನ್ನು ನೇಮಿಸಿದೆ. ಒಬ್ಬ ಶಕ್ತಿಶಾಲಿ ದೊರೆ ತನ್ನ ಅಧೀನದಲ್ಲಿರುವವನಿಗೆ ಹೇಳುವ ಹಾಗೆ ನಾನು ಹೇಳಿದೆ: ಎಲೈ ಅಬ್ದುಶ್ಶುಕೂರ್, ನಿನ್ನ ದೇಶ ಬೇಗನೆ ಏಕದೇವ ವಿಶ್ವಾಸ ಹೊಂದಬೇಕು. ಬಹುದೇವಾರಾಧನೆ ತ್ಯಜಿಸಬೇಕು. ಹಝ್ರತ್ ಮುಹಮ್ಮದ್ ﷺ ರ ಉಪದೇಶಗಳನ್ನು ಅನುಷ್ಠಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಅನುಸರಿಸಬೇಕು. ಇದು ನಿನ್ನ ಮೇಲೆ ಹೊಣೆಗಾರಿಕೆಯಾಗಿದೆ– ಎಂದು. ನಾನು ಹೇಳಿದ ಮಾತುಗಳು ಓರ್ವ ಬಲಶಾಲಿ ದೊರೆಯ ಮಾತಿನಂತೆ ಇತ್ತು. ಅದೇ ರೀತಿ ಭವಿಷ್ಯವಾಣಿಯಲ್ಲಿ **ನಾವು ನಮ್ಮ ಆತ್ಮ ಅವನಿಗೆ ಹಾಕುವೆವು** ಎಂದಿದೆ. ಇದು ಇಲ್‌ಹಾಮ್ ದೊರಕುವ ಬಗ್ಗೆ ಸೂಚನೆಯಾಗಿದೆ. ನನ್ನ ಸ್ವಪ್ನದಲ್ಲಿ ಇದರ ಬಗ್ಗೆ ಸಹ ಸೂಚನೆಗಳಿವೆ."

1936ರಲ್ಲಿ ಮಜ್ಲಿಸ್ ಶೂರಾದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ವಿಷಯದಲ್ಲಿ ಒಂದು ಭಾಷಣ ಮಾಡಿದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬ (ಶಿಷ್ಯರು) ಬಹಳ ಸಂಖ್ಯೆಯಲ್ಲಿದ್ದರು. ತಾಬಿಈನ್ (ಅವರ ಅನಂತರದ ಜನರು) ಸಹ ಬಹಳ ಸಂಖ್ಯೆಯಲ್ಲಿದ್ದರು. ಅವರನ್ನು ಸಂಭೋಧಿಸಿ ಹೀಗೆ ಹೇಳಿದರು:

"ನಾವು ನುಬುವ್ವತ್ತನ್ನು ಸಮೀಪ ಕಾಲದಲ್ಲಿ ಕಂಡವರಾಗಿದ್ದೇವೆ. ನಾವು ವಾಗ್ದತ್ತ ಖಿಲಾಫತ್ ಕಾಲದಲ್ಲಿದ್ದೇವೆ. ಇಂತಹ ಸಂದರ್ಭ ಎಲ್ಲ ಖಲೀಫರ ಕಾಲದವರಿಗೆ ಲಭಿಸದು. ಮುಂದಿನ ಕಾಲದ ಜನರು ಮಾತ್ರವಲ್ಲ ಖಲೀಫರು ಸಹ ನಮ್ಮ ಕೆಲಸ ಮತ್ತು ನಮ್ಮ ಮಾತುಗಳಿಂದ ಮಾರ್ಗದರ್ಶನ ಪಡೆಯುವರು. ನಾನು ಖಲೀಫ ಆದುದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ನಿಧನ ಹೊಂದಿದ ಮರುದಿನ ಅಹ್ಮದಿಯಾ ಜಮಾಅತಿನ ಜನರು ನನ್ನ ಖಿಲಾಫತ್ ಬಗ್ಗೆ ಒಮ್ಮತ ಹೊಂದಿದುದರಿಂದಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಖಲೀಫರಾಗುವ ಮೊದಲೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇಲ್‌ಹಾಮ್ ಲಭಿಸಿತ್ತು ನಾನು ಖಲೀಫ ಆಗುವೆನು ಎಂದು. ಆದುದರಿಂದ ನಾನು ಬರೇ ಖಲೀಫ ಮಾತ್ರ ಅಲ್ಲ. ನಾನು ವಾಗ್ದತ್ತ ಖಲೀಫ ಆಗಿರುವೆನು. ನಾನು ಅಲ್ಲಾಹನಿಂದ ನೇಮಿತನಾಗಿಲ್ಲವಾದರೂ ನನ್ನ ಶಬ್ದ ಅಲ್ಲಾಹನ ಶಬ್ದವಾಗಿದೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಅದರ ಬಗ್ಗೆ ತಿಳಿಸಿರುವನು. ಈ ಖಿಲಾಫತಿನ ಸ್ಥಾನ ಪ್ರವಾದಿ ಮತ್ತು ಖಲೀಫ ಇವುಗಳ ಮಧ್ಯದ ಸ್ಥಾನವಾಗಿದೆ. ಇದು ಎಂತಹ ಕಾಲ ಘಟ್ಟವಾಗಿದೆ ಎಂದರೆ ಅಹ್ಮದಿಯಾ ಜಮಾಅತ್ ಇದು ನಷ್ಟವಾಗದಂತೆ ನೋಡಬೇಕು ಮತ್ತು ಅಲ್ಲಾಹನ ಮುಂದೆ ಜಯಗಳಿಸಬೇಕು. ಪ್ರವಾದಿಗಳು ಎಲ್ಲಾ ದಿನಗಳಲ್ಲೂ ಆಗಮಿಸುವುದಿಲ್ಲ ಎಂದು ಹೇಳುವುದು ಸತ್ಯವಾಗಿರುವ ಹಾಗೆ ವಾಗ್ದತ್ತ ಖಲೀಫ ಸಹ ಎಲ್ಲಾ ದಿನಗಳಲ್ಲೂ ಆಗಮಿಸುವುದಿಲ್ಲ."

ಜನರು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರೊಂದಿಗೆ ಅವರು ಹಾಗೆ ವಾದಿಸುವ ಮೊದಲು ಕೇಳುತ್ತಾ ಇದ್ದರು: ನೀವು ಮುಸ್ಲಿಹ್ ಮೌಊದ್ ಎಂದು ಏಕೆ ವಾದಿಸುವುದಿಲ್ಲ? ಆದರೆ, ಅವರು ಈ ರೀತಿ

ಉತ್ತರಿಸಿದ್ದರು: "ನಾನು ಮುಸ್ಲಿಹ್ ಮೌಊದ್ ಎಂದು ವಾದಿಸಬೇಕೆಂದು ಜನರು ಪ್ರಯತ್ನಿಸಿದ್ದರು. ಆದರೆ ಅದರ ಆವಶ್ಯಕತೆ ಇದೆ ಎಂದು ನಾನು ಎಂದೂ ಯೋಚಿಸಲಿಲ್ಲ. ನಾನು ಮುಸ್ಲಿಹ್ ಮೌಊದ್ ಆಗಿದ್ದರೆ ನಾನು ವಾದಿಸದಿರುವ ಕಾರಣ ನನ್ನ ಸ್ಥಾನದಲ್ಲಿ ಯಾವ ವ್ಯತ್ಯಾಸವೂ ಉಂಟಾಗಲಾರದು. ನನ್ನ ಅಭಿಪ್ರಾಯ ಪ್ರಕಾರ ದೇವನೇಮಿತನಲ್ಲದವನು ಅವನ ಬಗ್ಗೆ ಮಾಡಲಾದ ಭವಿಷ್ಯವಾಣಿ ಪ್ರಕಾರ ವಾದಿಸುವ ಆವಶ್ಯಕತೆ ಇಲ್ಲ. ಹೀಗಿರುವಾಗ ಇಂತಹ ವಾದದ ಆವಶ್ಯಕತೆ ನನಗೇನಿದೆ?"

1944ರಲ್ಲಿ ತಾನು ಮುಸ್ಲಿಹ್ ಮೌಊದ್ ಆಗಿರುವೆನೆಂದು ಪ್ರಕಟಣೆ ನೀಡಿದಾಗ ಅವರು ಹೇಳಿದರು: "ನಮ್ಮ ಜಮಾಅತಿನ ಸ್ನೇಹಿತರು ಈ ಭವಿಷ್ಯವಾಣಿಯನ್ನು ಮತ್ತು ಇಂತಹದೇ ಇತರ ಭವಿಷ್ಯವಾಣಿಗಳನ್ನು ನನ್ನ ಮುಂದೆ ಇರಿಸಿ ಇವುಗಳು ನನಗೆ ಸಂಬಂಧಿಸಿದ್ದಾಗಿದೆ ಎಂದು ಘೋಷಿಸಲು ಪದೇ ಪದೇ ಒತ್ತಾಯಿಸುತ್ತಾ ಇದ್ದರು. ದೀರ್ಘಕಾಲ ಹೀಗೆಯೇ ದಾಟಿ ಹೋಯಿತು. ಈ ದೀರ್ಘಕಾಲದ ಬಗ್ಗೆ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಲ್‌ಹಾಮ್‌ಗಳಲ್ಲಿ ಸೂಚನೆಗಳಿವೆ. ಈ ಭವಿಷ್ಯವಾಣಿ ನನಗೆ ಸಂಬಂಧಿಸಿವೆ ಎಂದು ಜನರು ಹೇಳುತ್ತಾ ಇದ್ದ ಕಾರಣ ನಾನು ಈ ಭವಿಷ್ಯವಾಣಿಗಳ ಕಡೆಗೆ ಹೆಚ್ಚಿನ ಗಮನ ನೀಡಿರಲಿಲ್ಲ. ಏಕೆಂದರೆ ನಾನು ಯಾವುದಾದರೂ ತಪ್ಪು ಯೋಚನೆ ಮಾಡಬಹುದೆಂದು ಹೆದರಿಕೆಯಿಂದ. ಆದರೆ ಈ ದಿನ ನಾನು ಎಲ್ಲಾ ಭವಿಷ್ಯವಾಣಿಗಳನ್ನು ಲಕ್ಷ್ಯವಿಟ್ಟು ಓದಿದೆ. ಈ ಭವಿಷ್ಯವಾಣಿಗಳನ್ನು ಶ್ರದ್ಧೆಯಿಂದ ಓದಿದ ನಂತರ ನಾನು ಅಲ್ಲಾಹನ ಅನುಗ್ರಹ ಮತ್ತು ದೃಢವಿಶ್ವಾಸದಿಂದ ಹೇಳುತ್ತೇನೆ ಈ ಭವಿಷ್ಯವಾಣಿಯನ್ನು ಅಲ್ಲಾಹನು ನನ್ನ ಮೂಲಕವೇ ಈಡೇರಿಸಿರುವನು."

ಅಲ್ಲಾಹನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರಿಗೆ ಅವರೇ ಮುಸ್ಲಿಹ್ ಮೌಊದ್ ಎಂದು ಸ್ಪಷ್ಟಪಡಿಸಿದಾಗ ಮತ್ತು ಪ್ರಕಟಿಸಲು ಸೂಚಿಸಿದಾಗ ಅವರು ಅದನ್ನು ಬಹಿರಂಗವಾಗಿ ಘೋಷಿಸಿದರು. ಮತ್ತು ಅವರು ವಿರೋಧಿಗಳಿಗೆ ಈ ರೀತಿ ಪಂಥಾಹ್ವಾನ ನೀಡಿದರು: "ನಾನು ಅಲ್ಲಾಹನ ಹೆಸರಿನಲ್ಲಿ ಆಣೆ ಹಾಕಿ ಹೇಳುತ್ತೇನೆ. ಮುಸ್ಲಿಹ್ ಮೌಊದ್ ಭವಿಷ್ಯವಾಣಿಯನ್ನು ಸತ್ಯಪಡಿಸಿ ಆಗಮಿಸಿದವನು ನಾನೇ ಆಗಿದ್ದೇನೆ. ನನ್ನನ್ನೇ ಅಲ್ಲಾಹನು ಈ ಭವಿಷ್ಯವಾಣಿಯನ್ನು ಈಡೇರಿಸುವವನನ್ನಾಗಿ ಮಾಡಿರುವನು. ಆಗಮಿಸಲಿರುವ ವಾಗ್ದತ್ತ ಪುರುಷನ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನುಡಿದ ಭವಿಷ್ಯವಾಣಿ ಪ್ರಕಾರ ನಾನು ಆಗಮಿಸಿರುವೆನು. ನಾನು ಸುಳ್ಳು ಸೃಜಿಸಿ ಹೇಳುತ್ತಿದ್ದೇನೆ ಅಥವಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದು ಯಾರಾದರೂ ದೋಷಾರೋಪ ಮಾಡುವುದಿದ್ದರೆ, ಅಂಥವರು ನನ್ನ ಮುಂದೆ ಬಂದು ಮುಬಾಹಲ (ಪ್ರಾರ್ಥನಾ ಸಮರ) ನಡೆಸಲಿ. ಆಗ ಅಲ್ಲಾಹನು ತನ್ನ ದೃಷ್ಟಾಂತಗಳ ಮೂಲಕ ಯಾರು ಸತ್ಯವಾದಿ ಮತ್ತು ಯಾರು ಸುಳ್ಳುವಾದಿ ಎಂದು ತೀರ್ಪು ನೀಡುವನು."

ನಾನು ಈಗ ಈ ಭವಿಷ್ಯವಾಣಿಯ ಬೇರೆ ಕೆಲವು ಭಾಗಗಳನ್ನು ವಿವರಿಸುವೆನು. **ಅವನು ಬಾಹ್ಯ ಜ್ಞಾನಗಳಿಂದ ತುಂಬಿಸಲ್ಪಡುವನು** ಎಂದು ಭವಿಷ್ಯವಾಣಿಯಲ್ಲಿ ಹೇಳಲಾಗಿದೆ. ಇದರ ಅರ್ಥವು– ಅಲ್ಲಾಹನು ಅವರಿಗೆ ಧರ್ಮಜ್ಞಾನ ಮತ್ತು ಪವಿತ್ರ ಖುರ್‌ಆನಿನ ಜ್ಞಾನ ನೀಡುವನು ಎಂದಾಗಿದೆ. ಅಲ್ಲಾಹನೇ ಸ್ವತಃ ಅವರಿಗೆ ಜ್ಞಾನ ಕಲಿಸುವ ಉಪಾಧ್ಯಾಯನಾಗುವನು. ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ:

"ನನ್ನ ವಿದ್ಯಾಭ್ಯಾಸ ಹೇಗಿತ್ತೆಂದರೆ ಅದರಲ್ಲಿ ಮನುಷ್ಯನ ಯಾವ ಪಾತ್ರವೂ ಇರಲಿಲ್ಲ. ಅಲ್ಲಾಹನು ತನ್ನ ದಿವ್ಯದೂತನ (ಮಲಕ್) ಮೂಲಕ ನನಗೆ ಪವಿತ್ರ ಖುರ್‌ಆನ್ ಜ್ಞಾನ ಕಲಿಸಿದನು. ನನ್ನೊಳಗೆ ಎಂತಹ ಸಿದ್ಧಿಯನ್ನು ಉಂಟುಮಾಡಿದನೆಂದರೆ ಖಜಾನೆಯ ಕೀಲಿಗೈ ಒಬ್ಬನಿಗೆ ದೊರೆತ ಹಾಗೆ ನನಗೆ ಪವಿತ್ರ ಖುರ್‌ಆನಿನ ಜ್ಞಾನದ ಕೀಲಿಗೈ ಲಭಿಸಿತು. ನನ್ನ ಎದುರಿಗೆ ನಿಲ್ಲಬಹುದಾದ ಯಾವ ವಿದ್ವಾಂಸನೂ ಇಲ್ಲ. ಪವಿತ್ರ ಖುರ್‌ಆನ್ ಮೂಲಕವೇ ನಾನು ಪ್ರಶ್ನೆಗಳಿಗೆ ಉತ್ತರ ನೀಡುವೆನು ಮತ್ತು ಪವಿತ್ರ ಖುರ್‌ಆನ್ ಮೂಲಕವೇ ಆಕ್ಷೇಪಗಳಿಗೆ ಖಂಡನೆ ನೀಡುವೆನು."

ಇನ್ನೊಂದು ಕಡೆ ಅವರು ಹೀಗೆ ಹೇಳುತ್ತಾರೆ: "ನಾನು ಅನೇಕ ದೀನೀ ಜ್ಞಾನಗಳನ್ನು ದಿವ್ಯದೂತರಿಂದ ಕಲಿತಿರುವೆನು. ನನಗೆ ಒಬ್ಬ ದಿವ್ಯದೂತ ಸೂರತುಲ್ ಫಾತಿಹದ ವ್ಯಾಖ್ಯಾನ ಕಲಿಸಿದರು. ಅಂದಿನಿಂದ ಇಂದಿನ ತನಕ ನನಗೆ ಸೂರತುಲ್ ಫಾತಿಹದ ಎಂತಹ ವ್ಯಾಖ್ಯಾನಗಳು ತೆರೆಯಲ್ಪಡುತ್ತಿವೆ ಎಂದರೆ ಅವುಗಳಿಗೆ ಕೊನೆಯೇ ಇಲ್ಲ. ನನ್ನ ಒಂದು ವಾದವೇನೆಂದರೆ ಯಾವುದೇ ಧರ್ಮದ ವ್ಯಕ್ತಿ ಆಧ್ಯಾತ್ಮಿಕ ಜ್ಞಾನಕ್ಕೆ ಸಂಬಂಧಿಸಿ ಯಾವುದಾದರೂ ವಿಷಯಗಳ ಬಗ್ಗೆ ತನ್ನ ಎಲ್ಲಾ ಧಾರ್ಮಿಕ ಗ್ರಂಥಗಳಿಂದ ತೆಗೆದು ವಿವರಿಸುವುದಕ್ಕಿಂತ ಹೆಚ್ಚಿನ ವಿಷಯಗಳನ್ನು ಅಲ್ಲಾಹನ ಅನುಗ್ರಹದಿಂದ ಸೂರತುಲ್ ಫಾತಿಹದಿಂದ ಮಾತ್ರ ನಾನು ತೆಗೆದು ತೋರಿಸಬಲ್ಲೆನು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಕಡೆ ಹೀಗೆ ಹೇಳುತ್ತಾರೆ: "ಖಿಲಾಫತ್ ಹುದ್ದೆಯನ್ನು ಹೊಂದಿದ ನಂತರ ಅಲ್ಲಾಹನು ಪವಿತ್ರ ಖುರ್‌ಆನಿನ ಜ್ಞಾನವನ್ನು ನನಗೆ ಎಷ್ಟು ಹೆಚ್ಚು ಹೆಚ್ಚಾಗಿ ಕಲಿಸಿದನೆಂದರೆ ನನ್ನ ಗ್ರಂಥಗಳನ್ನು ಓದಿ ಅದರಿಂದ ಲಾಭ ಪಡೆಯಲು ಮುಸ್ಲಿಮ್ ಸಮುದಾಯ ಖಿಯಾಮತ್ ತನಕ ನಿರ್ಬಂಧಿಸಲ್ಪಡುವುದು."

ಇನ್ನೊಮ್ಮೆ ಅವರು ಹೀಗೆ ಹೇಳಿದರು: "1907ರಲ್ಲಿ ನಾನು ಪ್ರಥಮ ಬಾರಿ ಸಾರ್ವಜನಿಕ ಭಾಷಣ ಮಾಡಿದಾಗ ಖಲೀಫತುಲ್ ಮಸೀಹ್ ಅವ್ವಲ್ ಉಪಸ್ಥಿತರಿದ್ದರು. ನಾನು ಭಾಷಣ ಮಾಡಿ ಕುಳಿತುಕೊಂಡಾಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಎದ್ದು ನಿಂತು ಹೇಳಿದರು– ನಾನು ನಿನಗೆ ಶುಭಾಶಯ ಕೋರುತ್ತೇನೆ. ನೀನು ಬಹಳ ಉತ್ತಮ ಭಾಷಣ ಮಾಡಿದೆ. ನಾನು ನಿನ್ನನ್ನು ಸಂತೋಷಪಡಿಸಲು ಇದನ್ನು ಹೇಳುತ್ತಾ ಇಲ್ಲ. ನಾನು ಬಹಳ ಗ್ರಂಥಗಳನ್ನು ಓದಿರುವೆನು. ನಾನು ದೊಡ್ಡ ದೊಡ್ಡ ವ್ಯಾಖ್ಯಾನ ಗ್ರಂಥಗಳನ್ನು ಸಹ ಓದಿದ್ದೇನೆ. ಆದರೆ ಈ ದಿನ ನಾನು ನಿನ್ನ ಭಾಷಣ ಮೂಲಕ ಆಲಿಸಿದ ಪವಿತ್ರ ಖುರ್‌ಆನಿನ ವ್ಯಾಖ್ಯಾನವು ಹಿಂದಿನ ಕಾಲದ

ವ್ಯಾಖ್ಯಾನ ಗ್ರಂಥಗಳ ಪೈಕಿ ಯಾವುದರಲ್ಲೂ ಇಲ್ಲ. ಮಾತ್ರವಲ್ಲ ಅದು ನನಗೆ ಸಹ ಇದರ ಮೊದಲು ತಿಳಿದಿರಲಿಲ್ಲ.''

**ಉಲೂಮೆ ಬಾತಿನಿ (ಆಂತರಿಕ ಜ್ಞಾನ)ಗಳಿಂದ ತುಂಬಿಸಲ್ಪಡುವವನು** ಎಂದು ಭವಿಷ್ಯವಾಣಿಯಲ್ಲಿದೆ. ಇದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ಉಲೂಮೆ ಬಾತಿನಿ (ಆಂತರಿಕ ಜ್ಞಾನಗಳು) ಎಂದರೆ ಅಲ್ಲಾಹನಿಗೆ ವಿಶಿಷ್ಟವಾಗಿರುವವುಗಳಾಗಿವೆ. ಅದೃಶ್ಯದ ಬಗ್ಗೆ ಜ್ಞಾನ ಇದರಲ್ಲಿ ಸೇರಿದೆ. ಅಲ್ಲಾಹನು ಲೋಕದಲ್ಲಿ ವಿಶಿಷ್ಟ ಸೇವೆಗಾಗಿ ತಾನು ನೇಮಿಸಿದ ದಾಸರಿಗೆ ಅದರ ಜ್ಞಾನ ನೀಡುತ್ತಾನೆ. ಅದರ ಮೂಲಕ ತನಗೆ ಅವರೊಂದಿಗಿರುವ ಸಂಬಂಧ ಪ್ರಕಟಿಸುತ್ತಾನೆ. ಅವರ ಮೂಲಕ ಜನರ ವಿಶ್ವಾಸವನ್ನು ತಾಜಾಗೊಳಿಸುತ್ತಾನೆ. ಇದಕ್ಕೆ ಸಂಬಂಧಿಸಿ ಸಹ ಅಲ್ಲಾಹನು ನನಗೆ ವಿಶಿಷ್ಟ ವರದಾನ ನೀಡಿರುವನು. ನೂರಾರು ಸ್ವಪ್ನಗಳು ಮತ್ತು ಇಲ್‌ಹಾಮ್‌ಗಳು ನನಗೆ ಲಭಿಸಿವೆ. ಅವುಗಳು ಅದೃಶ್ಯ ಸಮಾಚಾರಗಳನ್ನು ಒಳಗೊಂಡಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತ ಕಾಲದಲ್ಲಿ ಅಂದರೆ ಖಿಲಾಫತ್ ಬಗ್ಗೆ ಯಾವ ಭಾವನೆಯೂ ಮನಸ್ಸಿನಲ್ಲಿ ಉದಿಸಲು ಸಾಧ್ಯವಿಲ್ಲದಿರುವಾಗ ನನಗೆ ಅಲ್ಲಾಹನು ಇಲ್‌ಹಾಮ್ ಮೂಲಕ ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಅವತೀರ್ಣವಾದ ವಚನವನ್ನು ಅವತೀರ್ಣಗೊಳಿಸಿದನು. ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮರೊಂದಿಗೆ ಹೀಗೆ ಹೇಳಲಾಗಿತ್ತು: 'ನಿನ್ನನ್ನು ನಿರಾಕರಿಸುವವರ ಮೇಲೆ ನಿನ್ನನ್ನು ನಂಬುವವರಿಗೆ ಖಿಯಾಮತ್ ತನಕ ಜಯ ನೀಡುವೆನು' ಆದರೆ ನನಗೆ ಹೆಚ್ಚು ಒತ್ತು ನೀಡಿ ಹೀಗೆ ಹೇಳಲಾಗಿತ್ತು. 'ನಾನು ನನ್ನ ಆಣೆ ಹಾಕಿ ಹೇಳುತ್ತೇನೆ. ನಾನು ನಿಶ್ಚಯವಾಗಿಯೂ ನಿನ್ನನ್ನು ನಿರಾಕರಿಸುವವರ ಮೇಲೆ ನಿನ್ನನ್ನು ನಂಬುವವರಿಗೆ ಖಿಯಾಮತ್ ತನಕ ಜಯ ನೀಡುವೆನು' ಎಂದು. ಈ ಇಲ್‌ಹಾಮ್ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನಾನು ಹೇಳಿದಾಗ ಅವರು ಅದನ್ನು ಬರೆದಿಟ್ಟುಕೊಂಡರು. ನಾನು ಈ ಇಲ್‌ಹಾಮ್ ಬಗ್ಗೆ ದೀರ್ಘಕಾಲದಿಂದ ನನ್ನ ಸ್ನೇಹಿತರಿಗೆ ಹೇಳುತ್ತಾ ಇದ್ದೇನೆ. ಇದರ ಪರಿಣಾಮ ನೋಡಿರಿ. ಎಷ್ಟೆಲ್ಲಾ ರೀತಿಗಳಲ್ಲಿ ನನ್ನನ್ನು ವಿರೋಧಿಸಲಾಯಿತು. ಆದರೆ ಅಲ್ಲಾಹನು ನನಗೆ ಜಯ ನೀಡಿದನು.''

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮತ್ತೊಂದೆಡೆ ಹೇಳುತ್ತಾರೆ: ''ಭವಿಷ್ಯವಾಣಿಯಲ್ಲಿ **ಮೂರನ್ನು ನಾಲ್ಕು ಮಾಡುವವನು** ಎಂದು ಹೇಳಿದುದು ಅನೇಕ ರೀತಿಗಳಲ್ಲಿ ನನ್ನ ಪರವಾಗಿ ಈಡೇರಿವೆ. ಮೊದಲನೆಯದಾಗಿ ಹೀಗೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಥಮ ಪುತ್ರ ಮಿರ್ಝಾ ಸುಲ್ತಾನ್ ಅಹ್ಮದ್, ಎರಡನೆಯವರು ಮಿರ್ಝಾ ಫಝ್ಲ್ ಅಹ್ಮದ್, ಮೂರನೆಯವರು ಮಿರ್ಝಾ ಬಶೀರ್ ಅವ್ವಲ್, ನಾಲ್ಕನೆಯವನಾಗಿ ನಾನು ಜನಿಸಿದೆ. ಈ ಭವಿಷ್ಯವಾಣಿ ಇನ್ನೊಂದು ರೀತಿಯಲ್ಲಿ ಹೀಗೆ ಈಡೇರಿತು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದುವಾಗ ಅವರನ್ನು ನಂಬುವ ಪುತ್ರರು ಮೂವರು ಮಾತ್ರವಾಗಿದ್ದರು. ಮಿರ್ಝಾ ಸುಲ್ತಾನ್ ಅಹ್ಮದ್ ಅವರ ಆಧ್ಯಾತ್ಮಿಕ ಪುತ್ರರಲ್ಲಿ ಸೇರಿರಲಿಲ್ಲ. ಆದರೆ, ನನ್ನ ಖಿಲಾಫತ್ ಕಾಲದಲ್ಲಿ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಬೈಅತ್ ಮಾಡಿದರು. ಹೀಗೆ ನಾನು ಮೂವರನ್ನು ನಾಲ್ವರನ್ನಾಗಿ ಮಾಡಿದೆ. ಇದೇ ಭವಿಷ್ಯವಾಣಿ ಮತ್ತೊಂದು ರೀತಿಯಲ್ಲಿ ಹೀಗೆ ಈಡೇರಿತು: ಮುಸ್ಲಿಹ್ ಮೌಊದ್ ಕುರಿತ ಭವಿಷ್ಯವಾಣಿ 1886ರಲ್ಲಿ ಪ್ರಕಟಿಸಲಾಯಿತು. ನಾನು 1889ರಲ್ಲಿ ಜನಿಸಿದೆ. ಹಾಗೆ ನಾನು ನಾಲ್ಕನೆಯ ವರ್ಷದಲ್ಲಿ ಜನಿಸಿ ಮೂರನ್ನು ನಾಲ್ಕು ಮಾಡುವವನಾದೆ.''

ಇನ್ನೊಂದೆಡೆ ಅವರು ಹೀಗೆ ಹೇಳಿದ್ದಾರೆ: ''ಭವಿಷ್ಯವಾಣಿಯಲ್ಲಿ ಹೀಗೆ ಸಹ ಹೇಳಲಾಗಿತ್ತು. **ಅವನ ಆಗಮನ ಕಾಲದಲ್ಲಿ ಅಲ್ಲಾಹನ ವೈಭವ ಪ್ರಕಟವಾಗುವುದು** ಇದು ನನ್ನ ಕಾಲದಲ್ಲಿ ಈಡೇರಿತು. ನಾನು ಖಲೀಫ ಆದ ಕೂಡಲೆ ಪ್ರಥಮ ಜಾಗತಿಕ ಮಹಾ ಯುದ್ಧ ಪ್ರಾರಂಭವಾಯಿತು. ಈಗ ದ್ವಿತೀಯ ಜಾಗತಿಕ ಮಹಾ ಯುದ್ಧ ಪ್ರಾರಂಭವಾಗಿದೆ. ಅದರಲ್ಲಿ ಅಲ್ಲಾಹನ ವೈಭವ ಪ್ರಕಟವಾಗುತ್ತಾ ಇದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಕಡೆ ಹೇಳುತ್ತಾರೆ: ''ಭವಿಷ್ಯವಾಣಿಯಲ್ಲಿ **ಅವನು ಸೆರೆಮನೆಗಳಲ್ಲಿ ಬಂದಿಸಲ್ಪಟ್ಟವರ ವಿಮೋಚಕನಾಗುವನು** ಎಂದು ಹೇಳಲಾಗಿದೆ. ಈ ಭವಿಷ್ಯವಾಣಿ ಅಲ್ಲಾಹನು ನನ್ನ ಮೂಲಕ ಈಡೇರಿಸಿದನು. ಮುಸ್ಲಿಮರು ತೀರಾ ಲಕ್ಷಿಸದ ಅತ್ಯಂತ ಕೆಳಮಟ್ಟದಲ್ಲಿ ಜೀವಿಸುತ್ತಿದ್ದ ಸಮುದಾಯಗಳಿಗೆ ನನ್ನ ಮೂಲಕ ಮಾರ್ಗದರ್ಶನ ದೊರೆಯುವಂತೆ ಅಲ್ಲಾಹನು ಮಾಡಿದನು. ಅವರು ಸೆರೆಮನೆವಾಸಿಗಳ ಹಾಗೆ ಜೀವಿಸುತ್ತಿದ್ದರು. ಅದೇ ರೀತಿ ಕಾಶ್ಮೀರದ ನಿವಾಸಿಗಳಿಗೆ ಸಂಬಂಧಿಸಿ ಸಹ ಈ ಭವಿಷ್ಯವಾಣಿ ಈಡೇರಿದೆ. ನನ್ನ ಮೂಲಕ ಅವರಿಗೆ ವಿಮೋಚನೆ ಮಾರ್ಗ ತೆರೆಯಲ್ಪಟ್ಟಿತು. ಅವರ ಶತ್ರುಗಳಿಗೆ ಸೋಲುಂಟಾಯಿತು.''

ಇನ್ನೊಂದು ಕಡೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇಲ್‌ಹಾಮ್ ಉಂಟಾಗಿತ್ತು– 'ನಾನು ನಿನ್ನ ಸಂದೇಶವನ್ನು ಲೋಕದ ಎಲ್ಲೆಗಳ ತನಕ ತಲಪಿಸುವೆನು' ಎಂದು. ಈ ಭವಿಷ್ಯವಾಣಿ ಅತ್ಯಂತ ಮಹತ್ವದ್ದಾಗಿದೆ. ಅದು ಅಸಾಧಾರಣವಾಗಿ ಈಡೇರಿತು. ನಾನು ಹುಟ್ಟಿ ಎರಡು ಎರಡೂವರೆ ತಿಂಗಳ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜನರಿಂದ ಬೈಅತ್ ಪಡೆಯಲು ಪ್ರಾರಂಭಿಸಿದರು. ಹಾಗೆ ಅಹ್ಮದಿಯಾ ಜಮಾಅತ್ ಸ್ಥಾಪಿಸಲ್ಪಟ್ಟಿತು. ಅಲ್ಲಾಹನು ನನ್ನ ಬಗ್ಗೆ ಹೇಳಿದ್ದನು: **ಅವನು ಜಗತ್ತಿನಾದ್ಯಂತ ಪ್ರಸಿದ್ಧನಾಗುವನು** ಎಂದು. ವಿವಿಧ ದೇಶಗಳಲ್ಲಿ ಅಹ್ಮದಿಯಾ ಪ್ರಚಾರ ಕೇಂದ್ರಗಳನ್ನು ತೆರೆಯಲು ಅಲ್ಲಾಹನು ನನಗೆ ಭಾಗ್ಯ ನೀಡಿದನು. ಅನಂತರ ಈ ಶೃಂಖಲೆ ವರ್ಧಿಸುತ್ತಾ ಹೋಯಿತು.''

ಒಟ್ಟಿನಲ್ಲಿ ಈ ಭವಿಷ್ಯವಾಣಿಯ ವಿವಿಧ ಭಾಗಗಳಿವೆ. ಅವೆಲ್ಲಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು

ಅನ್‌ಹು ಮೂಲಕ ಬಹಳ ಭವ್ಯವಾಗಿ ಈಡೇರಿದುವು. ಅನೇಕ ಸಲ ಈಡೇರಿದುವು. ವಿವಿಧ ಸ್ಥಳಗಳಲ್ಲಿ ಈಡೇರಿದುವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆ ಪ್ರಕಟವಾಯಿತು. ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ﷺ ರ ಶ್ರೇಷ್ಠತೆ ಪ್ರಕಟಗೊಂಡವು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಮೇಲೆ ಅಲ್ಲಾಹನು ತನ್ನ ಅಪರಿಮಿತ ಅನುಗ್ರಹಗಳನ್ನು ಯಾವಾಗಲೂ ಸುರಿಸುತ್ತಾ ಇರಲಿ. ನಮಗೆ ಸಹ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವ ಭಾಗ್ಯ ದೊರಕುವಂತಾಗಲಿ – ಆಮೀನ್.

ಜುಮುಅ ನಮಾಝ್ ನಂತರ ಹಝ್ರತ್ ಖಲೀಫತುಲ್ ಮಸೀಹರು ಮೌಲಾನ ಮುಹಮ್ಮದ್ ಸಿದ್ದೀಖ್ ಸಾಹೇಬ್ ಗುರ್‌ದಾಸ್‌ಪುರಿಯವರ ನಮಾಝೆ ಜನಾಝ ಗಾಯಿಬ್ ಅನುಷ್ಠಿಸಿದರು. ಮೃತರ ಸದ್ಗುಣಗಳ ಬಗ್ಗೆ ವಿವರಿಸಿದರು. ಅವರು ನಮ್ಮ ಜಮಾಅತಿನ ಮುಬಲ್ಲಿಗರಾಗಿದ್ದರು.

-------------*****-------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 20-02-2015.*

Summarized by *Nazarath Nashr-o-Isha'at,Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email***: *khutuba.kannada@gmail.com*